# ಸೆಲೆಬ್ರಿಟಿ

■ ಹನಿ

## ಸುಂದರಿಯ ಪ್ರೇಮ

ಎಮ್ಮಾ ವ್ಯಾಟ್ಸನ್ ಪ್ರೀತಿಯಲ್ಲಿ ಬಿದ್ದಿದ್ದಾಳಂತೆ. 'ಹ್ಯಾರಿ ಪಾಟರ್' ಚಿತ್ರ ಸರಣಿಯ ಈ ಹೀರೋಯಿನ್ 'ಸಿನಿಮಾದವರನ್ನು ಪ್ರೀತಿಸುವುದು ಸಾಧ್ಯವೇ ಇಲ್ಲ. ನಾನೇನಿದ್ದರೂ ಬೇರೆ ರಂಗದವರನ್ನು ಮೆಚ್ಚುವವಳು' ಎಂದು ಹೇಳಿಕೊಂಡೇ ಬಂದು, ಈಗ ಸಿನಿಮಾ ನಟನ ಪ್ರೇಮಪಾಶಕ್ಕೆ ಸಿಲುಕಿರುವುದು ದೊಡ್ಡ ಸುದ್ದಿ.

'ಹ್ಯಾರಿ ಪಾಟರ್'ನ ಏಳೂ ಚಿತ್ರಗಳಲ್ಲಿ ಹೀರೋಯಿನ್ ಆಗಿ ಮಿಂಚಿರುವ ಎಮ್ಮಾ, ಸದ್ಯಕ್ಕೆ ನಟ ಜಾನಿ ಸಿಮನ್ಸ್‌ನ ಪ್ರೇಮತೆಕ್ಕೆಯಲ್ಲಿ ಬಂಧಿ. 21ರ ಹರೆಯದ ಈ ಸುಂದರಿ ಪ್ರೇಮಕ್ಕೆ ಸಿಲುಕಿದ್ದರಲ್ಲಿ ವಿಶೇಷವೇನೂ ಇಲ್ಲ. ಯಾಕೆಂದರೆ ಸಿಮನ್ಸ್ ಕೂಡಾ ಸುಂದರಾಂಗನೇ; ಎಮ್ಮಾಳಷ್ಟೇ ಖ್ಯಾತಿವಂತ. ಇಬ್ಬರೂ ಜತೆ ಸೇರಿ ನಟಿಸಿರುವ 'ದಿ ಪರ್ಕ್ಸ್ ಆಫ್ ಬಿಯಿಂಗ್ ಎ ವಾಲ್‌ಫ್ಲವರ್' ಚಿತ್ರದ ಶೂಟಿಂಗ್ ವೇಳೆ ಪ್ರೇಮ ಅರಳಿತಂತೆ. ಪ್ರಿಯಕರನಿಗಾಗಿಯೇ ಎಮ್ಮಾ ಲಾಸ್ ಏಂಜಲೀಸ್‌ಗೆ ಶಿಫ್ಟ್ ಆಗಿದ್ದಾಳೆ ಎಂದೂ ಸುದ್ದಿಯಿದೆ.



'ಹ್ಯಾರಿ ಪಾಟರ್'ನ ಏಳನೇ ಚಿತ್ರವೇ ಕೊನೇ ಚಿತ್ರ. ಆ ಸಿನಿಮಾದಲ್ಲಿ ಹೀರೋ ಆಗಿದ್ದ ಡೇನಿಯಲ್ ರೆಡ್‌ಕ್ಲಿಫ್ ಶೂಟಿಂಗ್‌ನ ಅನುಭವವನ್ನು ಬಣ್ಣಿಸಿ ಹೇಳಿ ಎಮ್ಮಾಳನ್ನು ಮುಜುಗರಕ್ಕೆ ಸಿಲುಕಿಸಿದ್ದ. 'ಎಮ್ಮಾಳಿಗೆ ಮೃದುವಾಗಿ ಮುತ್ತು ಕೊಡುವುದು ಗೊತ್ತೇ ಇಲ್ಲ. ಸಿನಿಮಾದಲ್ಲಿ ನನ್ನನ್ನು ಚುಂಬಿಸುವ ದೃಶ್ಯದಲ್ಲಿ ಆಕೆ ಭಾವಾವೇಶಕ್ಕೆ ಒಳಗಾಗಿ ದೃಢವಾಗಿ ಚುಂಬಿಸಿದ್ದಳು' ಎಂದು ಡೇನಿಯಲ್ ಹೇಳಿದ್ದು ಎಮ್ಮಾಳ ವ್ಯಕ್ತಿತ್ವದ ಬಗ್ಗೆಯೇ ಟೀಕೆಗಳು ಏಳಲು ಕಾರಣವಾಗಿದ್ದವು. ಅಷ್ಟಾಗಿಯೂ ಎಮ್ಮಾಳ ಬೇಡಿಕೆ ಕಡಿಮೆಯಾಗಿರಲಿಲ್ಲ. ಬ್ರಿಟನ್ನಿನ 'ಬೆಸ್ಟ್ ಡ್ರೆಸ್ಡ್ ವುಮನ್' ಎಂಬ ಪ್ರಶಸ್ತಿ ಗೆದ್ದಿರುವ ಎಮ್ಮಾ, ಈಗಲೂ ಬಹುಬೇಡಿಕೆಯ ನಟಿ. ಬ್ರಿಟನ್ನಿನ 30ರ ಹರೆಯಕ್ಕಿಂತ ಕೆಳಗಿನ ಅತಿ ದೊಡ್ಡ ಶ್ರೀಮಂತರ ಪಟ್ಟಿಯಲ್ಲೂ ಎಮ್ಮಾ 3ನೇ ಸ್ಥಾನದಲ್ಲಿದ್ದಾಳೆ. ಆಕೆಯ ಸಂಪತ್ತು 20 ದಶಲಕ್ಷ ಪೌಂಡ್ ಅಂತೆ! ಸುಂದರಿ, ಶ್ರೀಮಂತೆ ಹಾಗೂ ಹದಿಹರೆಯದಾಕೆ– ಪ್ರೀತಿಸಲು ಇನ್ನೇನು ಬೇಕು?



## ಚಿದುಗೆ ಕಿರಿಕಿರಿ

ಕೇಂದ್ರದ ಗೃಹ ಸಚಿವ ಚಿದಂಬರಂ ಪಳನಿಯಪ್ಪನ್ (ಬರ್ತ್‌ಡೇ 16-9-1945) ಹೊಸ ಕಿರಿಕಿರಿ ಎದುರಿಸುತ್ತಿದ್ದಾರೆ. ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾ ಚಿದಂಬರಂಗೆ ರಾಜಕೀಯ ಕಾಟ ಕೊಡುತ್ತಿರುವ ಹೊಸ ಶತ್ರು. ತಮಿಳುನಾಡಿನಲ್ಲಿ ದೊಡ್ಡ ಮಟ್ಟದ ಗೆಲುವು ಸಾಧಿಸಿ ಅಧಿಕಾರ ಹಿಡಿದಿರುವ ಜಯಲಲಿತಾ, ಏಕಕಾಲದಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಜತೆಗೆ 'ಮಧುರ ದೂರವಾಣಿ' ಸಂಬಂಧಗಳನ್ನು ಇಟ್ಟುಕೊಂಡೇ ಇನ್ನೊಂದೆಡೆ ಕಾಂಗ್ರೆಸ್‌ನ ಅತಿರಥ ಚಿದಂಬರಂ ವಿರುದ್ಧ ಕತ್ತಿ ಮಸೆಯುತ್ತಿದ್ದಾರೆ. 'ಕಳೆದ ಲೋಕಸಭಾ ಚುನಾವಣೆಯಲ್ಲಿ ಚಿದಂಬರಂ ಅವರು ಶಿವಗಂಗಾ ಕ್ಷೇತ್ರದಲ್ಲಿ ಗೆದ್ದಿದ್ದು ವಂಚನೆ ಮಾಡಿ' ಎನ್ನುವುದು ಜಯಮ್ಮನ ಆರೋಪ. ಆಗ ಚುನಾವಣೆಯ ಮತ ಎಣಿಕೆ ನಡೆದಾಗ ಮೊದಲು ಅಣ್ಣಾ ಡಿಎಂಕೆ ಅಭ್ಯರ್ಥಿ ರಾಜಾ ಕಣ್ಣಪ್ಪನ್ ಗೆದ್ದರೆಂದು ಘೋಷಿಸಿ, ಬಳಿಕ ಮರುಎಣಿಕೆ ನಡೆಸಿ ಚಿದಂಬರಂ 3354 ಮತಗಳಿಂದ ಗೆದ್ದರೆಂದು ಪ್ರಕಟಿಸಲಾಗಿತ್ತು. ಇದೇ ಜಯಲಲಿತಾ ಆರೋಪಕ್ಕೆ ಮೂಲ. ಈ ಮೂಲಕ ಕಾಂಗ್ರೆಸ್ ಪಕ್ಷದಲ್ಲಿ ಚಿದಂಬರಂ ಹಿಡಿತವನ್ನು ದುರ್ಬಲಗೊಳಿಸಲೂ ಜಯಾ ಲೆಕ್ಕಾಚಾರ ನಡೆದಿದೆ.

ಚಿದು ಎಂದೇ ಜನಪ್ರಿಯರಾಗಿರುವ ಚಿದಂಬರಂ ರಾಜಕಾರಣಿ ಮಾತ್ರವಲ್ಲ, ಚತುರ ವಕೀಲ ಕೂಡಾ. ಹೈಕೋರ್ಟ್, ಸುಪ್ರೀಂಕೋರ್ಟ್‌ಗಳಲ್ಲಿ ಹಲವು ಕೇಸ್‌ಗಳನ್ನು ಗೆದ್ದಿರುವ ಅವರು, 'ಜಯಾ ಆರೋಪ ನ್ಯಾಯಾಂಗ ನಿಂದನೆ' ಎಂಬ ಮರುಬಾಣ ಎಸೆದಿದ್ದಾರೆ. 2008ರಲ್ಲಿ ಗೃಹಸಚಿವರಾಗಿದ್ದ ಶಿವರಾಜ್ ಪಾಟೀಲ್ ಪ್ರತಿಕೂಲ ಟೀಕೆಗಳಿಂದ ರಾಜೀನಾಮೆ ಕೊಟ್ಟಾಗ ಆ ಸ್ಥಾನಕ್ಕೆ ಬಂದವರು ಚಿದು. ಅದಾಗಲೇ ಹಣಕಾಸು ಸಚಿವರಾಗಿ ತಮ್ಮ ಛಾಪು ಮೂಡಿಸಿದ್ದ ಚಿದು, ಸೋನಿಯಾ ಗಾಂಧಿಯವರ ನಿಕಟವರ್ತಿ ಕೂಡಾ. ಪಕ್ಷದಲ್ಲಿ ಅವರಿಗೆ ಅವರದ್ದೇ ಆದ ತೂಕವಿದೆ. ಅದೂ ಸುಮ್ಮನೆ ಬಂದದ್ದಲ್ಲ. ರಾಜೀವ್‌ಗಾಂಧಿ ಮತ್ತು ಪಿವಿಎನ್ ಸರಕಾರದಲ್ಲಿ ರಾಜ್ಯ ಸಚಿವರಾಗಿ ಕೆಲಸ ಮಾಡಿದ್ದು ಆ ಬಳಿಕ ಭಡ್ತಿ ಸಿಕ್ಕಿತು. ಮದ್ರಾಸಿನ ಪ್ರೆಸಿಡೆನ್ಸಿಯಲ್ಲಿ ವಿಜ್ಞಾನ ಪದವಿ ಪಡೆದು, ಲೊಯೊಲಾದಲ್ಲಿ ಮಾಸ್ಟರ್ಸ್ ಮಾಡಿ; ಮದ್ರಾಸ್ ಲಾ ಕಾಲೇಜಲ್ಲಿ ಕಾನೂನು ಓದಿ, ಹಾರ್ವರ್ಡ್‌ನಲ್ಲಿ ಎಂಬಿಎ ಮಾಡಿರುವ ಚಿದಂಬರಂ ಸದ್ಯದ ಮಟ್ಟಿಗಂತೂ ಜಯಲಲಿತಾ ಅವರ ನಂಬರ್ ಒನ್ ಶತ್ರು. ಚೆಟ್ಟಿನಾಡು ರಾಜಮನೆತನದ ಕುಡಿಯಾದ ಚಿದಂಬರಂರನ್ನು 'ಅಷ್ಟು ಸುಲಭವಾಗಿ ಮಣಿಸಲು ಸಾಧ್ಯವಿಲ್ಲ' ಎನ್ನುವುದು ಜಯಾರಿಗೂ ಗೊತ್ತು! ಆದರೆ 'ಕಿರಿಕಿರಿ ಕೊಡುವಷ್ಟು ತಾಖತ್ತಂತೂ ಜಯಾರಿಗಿದೆ' ಎನ್ನುವುದು ಚಿದುಗೂ ಗೊತ್ತು!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65